

ಅಶೋಕ್ ಅವರ ವಿದ್ಯಾರ್ಥಿನಿಯರ ನೃತ್ಯಪ್ರದರ್ಶನ

ನೀಡಲಾರಂಭಿಸಿದರು. ದೇಶದೆಲ್ಲೆಡೆ ಅಲ್ಲದೆ ವಿದೇಶಗಳಿಗೂ ಹೋಗಿ ಅದ್ಭುತ ಭರತನಾಟ್ಯ ಪ್ರದರ್ಶನ ನೀಡಿ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿದರು. ಈ ವಿದ್ಯಾರ್ಥಿಗಳು ಲಂಡನ್, ಆಸ್ಟ್ರೇಲಿಯಾ, ಮಲೇಷ್ಯಾ, ದುಬೈ, ಹಾಂಕಾಂಗ್, ಶ್ರೀಲಂಕಾ, ಅಮೆರಿಕ, ಕೆನಡ ಮೊದಲಾದ ದೇಶಗಳಲ್ಲಿ ನೀಡಿದ ನೃತ್ಯ ಕಾರ್ಯಕ್ರಮಗಳ ಸಂಖ್ಯೆ ಬರೊಬ್ಬರಿ 800ಕ್ಕೂ ಹೆಚ್ಚು. ಗುರು ಅಶೋಕ ಅವರ ಈ ಸಾಧನೆ ‘ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್’ನಲ್ಲಿ ದಾಖಲೆ ಬರೆಯಿತು.

ಅಂದ ಹಾಗೆ ಈ ಸಾಧನೆ ಗರಿಬಿಚ್ಚಿದ್ದು 1986ರಲ್ಲಿ. 1988ರಿಂದ ಈಚೆಗೆ ನಾಟ್ಯಾಚಾರ್ಯ ಅವರ ಯಶಸ್ಸಿನ ಮೆಟ್ಟಿಲಿನ ಗ್ರಾಫ್ ಉತ್ತುಂಗಕ್ಕೇರಿದೆ. ಅಂಥ ಮಕ್ಕಳು ಮಾತ್ರವಲ್ಲದೆ ಇತರ ಮಕ್ಕಳಿಗೂ ಭರತನಾಟ್ಯದ ಸವಿಯುಣಿಸಿ ನಮ್ಮ ಪರಂಪರೆಯನ್ನು ಜತನವಾಗಿ ಕಾಪಿಟ್ಟುಕೊಳ್ಳುತ್ತಲೇ ಬಂದಿದ್ದಾರೆ. ಸುಮಾರು 35 ಮಕ್ಕಳಿಗೆ ನೃತ್ಯ ಅರ್‍ರಂಗೇಟ್ರಂ ನಡೆಸಿಕೊಟ್ಟದ್ದಲ್ಲದೆ, 25ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ ನಡೆಸಿದ ವಿದ್ವತ್ ಪರೀಕ್ಷೆಯಲ್ಲಿ ಡಿಸ್ಟಿಂಕ್ಷನ್‌ನಲ್ಲಿ ಪಾಸಾಗಿದ್ದು ಅಶೋಕ್ ಅವರ ಅಗ್ಗಳಿಕೆ.

ಸುಮಾರು 2004ರವರೆಗೆ ಅಂಥ ವಿದ್ಯಾರ್ಥಿಗಳು ಇವರ ಬಳಿ ನಾಟ್ಯ ಕಲಿತಿದ್ದು ಸದ್ಯ ಉನ್ನತ ಶಿಕ್ಷಣ ಪಡೆದು ಪ್ರತಿಷ್ಠಿತ ಹುದ್ದೆಗಳನ್ನು ನಿಭಾಯಿಸುತ್ತಿದ್ದಾರೆ. ಭರತನಾಟ್ಯ ಆಸಕ್ತ ಸುಮಾರು 200 ಮಕ್ಕಳು ಈಗ ‘ನಾಟ್ಯಾಂಜಲಿ’ ಸಂಸ್ಥೆಯಲ್ಲಿ ಭರತನಾಟ್ಯ ಕಲಿಯುತ್ತಿದ್ದಾರೆ. ನೃತ್ಯ ಕ್ಷೇತ್ರ ಆಧುನಿಕತೆಯತ್ತ ಸಾಗಿದರೂ ಸಾಂಪ್ರದಾಯಿಕ ಚೌಕಟ್ಟನ್ನು ಮೀರದೆ, ಕಳೆದ 38 ವರ್ಷಗಳಿಂದ ನೃತ್ಯ ಹೇಳಿಕೊಡುತ್ತಿರುವುದು ಅಶೋಕ್ ಅವರ ಸಾಧನೆ. ತಮ್ಮ ಸೃಜನಶೀಲ ವ್ಯಕ್ತಿತ್ವಕ್ಕೆ ಬಿಂಬ ಎಂಬಂತೆ ಪ್ರಯೋಗಾತ್ಮಕವಾಗಿ ಕಲಿಸುವುದು ಇವರ ಹೆಚ್ಚುಗಾರಿಕೆ.

### ಪ್ರಶಸ್ತಿ, ಬಿರುದುಗಳು...

ಅಶೋಕ್ ಅವರು ಹಲವು ಪ್ರಶಸ್ತಿ, ಪುರಸ್ಕಾರಗಳಿಗೂ ಭಾಜನರಾಗಿದ್ದಾರೆ. ಇಂಗ್ಲೆಂಡ್‌ನ ಪ್ರಧಾನಿಯಾಗಿದ್ದ ಟೋನಿ ಬ್ಲೇರ್ ಅವರಿಂದ ಪುರಸ್ಕಾರ, ಕೆನಡಾದ ಟೊರಾಂಟೊ ರಾಜ್ಯಪಾಲರಿಂದ ಪುರಸ್ಕಾರ, ಚೆನ್ನೈನ ಯುವಕಲಾ ಭಾರತಿ ಇವರಿಂದ ಕಲೆಯುಗ ನಾಟ್ಯಾಚಾರ್ಯ ಬಿರುದು, ಕಲಾವತಂಸ ಬಿರುದು, ಕರ್ನಾಟಕ ಸರ್ಕಾರದ ‘ಕರ್ನಾಟಕ ಕಲಾಶ್ರೀ’ ಪುರಸ್ಕಾರ ಇವರ ನೃತ್ಯಸಾಧನೆಗೆ ಸಿಕ್ಕಿರುವ ಕೆಲವು ಪ್ರಮುಖ ಗೌರವಗಳು.

ಅಶೋಕ್ ಅವರಿಗೆ ನೃತ್ಯಕಲೆ ಪರಂಪರಾಗತವಾಗಿ ಬಂದಿದ್ದಲ್ಲ. ತಂದೆ ಅನಂತರಾಮಯ್ಯ ಬೆಂಗಳೂರಿನ ಎಜಿಎಸ್ ಕಚೇರಿಯಲ್ಲಿ ಅಕೌಂಟ್ಸ್ ಆಫೀಸರ್ ಆಗಿದ್ದವರು. ಸಂಗೀತದಲ್ಲಿ ಆಸಕ್ತಿ ಇತ್ತು. ಆದರೆ ತಾಯಿಗೆ ಮಗ ನೃತ್ಯ ಮಾಡುವುದು ಹಿಡಿಸುತ್ತಿರಲಿಲ್ಲ. ‘ಮಗ ಮೂರೂ ಹೊತ್ತು ಕುಣೀತಾನೆ, ಓದಲ್ಲ’ ಎಂದು ತಮ್ಮ ಸ್ನೇಹಿತರ ಬಳಿ ಹೇಳಿಕೊಂಡಿದ್ದರು. ಹೆತ್ತವರ ಸಹಕಾರ, ಪ್ರೋತ್ಸಾಹ ಇಲ್ಲದೇ ಇದ್ದರೂ ತಮ್ಮ ಸ್ವಂತ ಆಸಕ್ತಿಯಿಂದ ನೃತ್ಯದಲ್ಲಿ ಸಾಧನೆಯ ಶಿಖರ ಏರಿರುವುದು ಹೆಮ್ಮೆಯ ವಿಚಾರ.

ವಿಜಯಾ ಕಾಲೇಜಿನಲ್ಲಿ ಬಿ.ಕಾಂ. ಪದವಿ ಮುಗಿಸಿದ ಗುರು ಅಶೋಕ್, ಭರತನಾಟ್ಯ, ಕೂಚುಪುಡಿ, ಕಥಕ್ ಮೂರೂ ನೃತ್ಯ ಪ್ರಕಾರಗಳಲ್ಲೂ ಪಳಗಿದವರು. ಭರತನಾಟ್ಯವನ್ನು ರಾಧಿಕಾ ಶ್ರೀಧರ್, ಭಾನುಮತಿ, ಕಥಕ್ ಅನ್ನು ಮಾಯಾರಾವ್, ಕೂಚುಪುಡಿಯನ್ನು ಸುನಂದಾದೇವಿ ಅವರ ಬಳಿ ಕಲಿತವರು. ದೂರದರ್ಶನದ ‘ಎ’ ಗ್ರೇಡ್ ಕಲಾವಿದರಾಗಿರುವ ಅಶೋಕ್, ಕೇಂದ್ರ ಸರಕಾರದ ಫೆಲೋಶಿಪ್‌ಗೆ ಕೂಡ ಪಾತ್ರರಾಗಿದ್ದವರು. ಸದ್ಯ ರಾಜ್ಯ ಸಂಗೀತ–ನೃತ್ಯ ಅಕಾಡೆಮಿಯ ಸದಸ್ಯರೂ ಆಗಿದ್ದಾರೆ.

‘ದೃಷ್ಟಿ ಇಲ್ಲದ ಮಕ್ಕಳಿಗೆ ನೃತ್ಯ ಹೇಳಿಕೊಡುವುದು ಸುಲಭದ ಮಾತಲ್ಲ. ಸ್ಪರ್ಶ ಮತ್ತು ಭಾವನೆ ಟೆಕ್ನಿಕ್ ಅನ್ನು ಬಳಸಿ ಮಕ್ಕಳಿಗೆ ಕಲಿಸಿದೆ. ಭರತನಾಟ್ಯ ಮಾಡುವಾಗ ಅಂಥ ಮಕ್ಕಳು ನನ್ನ ಕಾಲಿನ ಚಲನೆಯನ್ನು ಮುಟ್ಟಿ ಫೀಲ್ ಮಾಡಿಕೊಂಡು, ನಾದವನ್ನು ಆಲಿಸಿಕೊಂಡು ನೃತ್ಯ ಕಲೀತಿದ್ರು. ಅಲ್ಲದೆ ನೃತ್ಯದ ಅಡವುಗಳು, ಆಂಗಿಕ ಚಲನೆ, ಲಯಬದ್ಧ ನಡೆಗಳನ್ನು ಬೇಗನೆ ಕಲಿಯುತ್ತಿದ್ದರು. ಕಲಿಸಿದ ಪಾಠವನ್ನು ಮರುದಿನದ ತರಗತಿಯಲ್ಲಿ ಚಾಚೂತಪ್ಪದೆ ಒಪ್ಪಿಸುತ್ತಿದ್ದರು’ ಎಂದು ಹೇಳುತ್ತಾರೆ ವಿದ್ವಾನ್ ಅಶೋಕ್.

ಇವರ ಮಕ್ಕಳಾದ ಅದಿತಿ ಅಶೋಕ್ ಹಾಗೂ ಸ್ಫೂರ್ತಿ ಅಶೋಕ್ ಕೂಡ ನೃತ್ಯ ಮಾಡುತ್ತಾರೆ. ಕೊರಿಯೊಗ್ರಫಿ, ನಟುವಾಂಗಗಳಲ್ಲೂ ತೊಡಗಿಸಿಕೊಂಡಿದ್ದಾರೆ. ಸದ್ಯ ಮಕ್ಕಳಲ್ಲಿ ನೃತ್ಯ ಕಲೆ ಪೋಷಿಸುವ, ಮಕ್ಕಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ನೃತ್ಯ ಪ್ರದರ್ಶನ ಕಡಿಮೆಗೊಳಿಸಿ ತರಬೇತಿ, ಕೊರಿಯೊಗ್ರಫಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ.

ಇವರ ಹಲವಾರು ನೃತ್ಯವಿದ್ಯಾರ್ಥಿಗಳು ದೇಶ ವಿದೇಶಗಳಲ್ಲಿ ಪ್ರದರ್ಶನ ನೀಡುತ್ತಿದ್ದಾರೆ. ಕಥಕ್‌ನಲ್ಲಿ ಖುಷಿ, ಸುಪ್ರಜಾ, ಚಂದನ, ಸ್ಫೂರ್ತಿ, ಅನನ್ಯಾ ಹೆಸರುವಾಸಿಯಾಗಿದ್ದಾರೆ. ಭರತನಾಟ್ಯದಲ್ಲಿ ಸುಮೇಧಾ, ಶ್ರೀಗೌರಿ ಮುಂತಾದವರು ಮಿಂಚುತ್ತಿದ್ದಾರೆ. ಇವರು ಕೊರಿಯೊಗ್ರಫಿ ಮಾಡಿರುವ ‘ಶಕ್ತಿ, ರಾಮಾಯಣ, ಭರತ ಬಾಹುಬಲಿ, ಜಿನದತ್ತರಾಯ, ಪಂಚತಂತ್ರ, ಸಾಮ್ರಾಟ ಅಶೋಕ, ದಶಾವತಾರ ಮುಂತಾದ ನೃತ್ಯ ಸಂಯೋಜನೆಗಳು ಜನಮನ ಗೆದ್ದಿವೆ, ಹಲವು ಪ್ರತಿಷ್ಠಿತ ವೇದಿಕೆಗಳಲ್ಲಿ ಪ್ರೇಕ್ಷಕರನ್ನು ಹಿಡಿದಿಟ್ಟಿವೆ. ಇವರು ನಡೆಸಿಕೊಡುವ ಕೃಷ್ಣಲೀಲಾ ನೃತ್ಯ ರೂಪಕ, ಗರುಡಧ್ವಜ–ಗರುಡಗಮನ ನೃತ್ಯ ಅತ್ಯಂತ ಮನಮೋಹಕ. ■